**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಮುಳಬಾಗಿಲು</u>**

**ಸಿಸಿ ನಂ. 1916/2024**

ಪಿಡಬ್ಲ್ಯೂಃ 1

**ದಿನಾಂಕಃ12.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮಧ್ಯಂತರ ಅರ್ಜಿಯ ಆದೇಶದ ಮೇರೆಗೆಃ</u>**

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಂ ಬಿ ಆರ್ ರವರಿಂದಃ</u>**

ನನ್ನ ಸ್ವಂತ ಗ್ರಾಮ ಚಿಕ್ಕಪದ್ಮಘಟ್ಟ. ನಾನು ವ್ಯವಸಾಯ ಮಾಡುತ್ತೇನೆ, ನನಗೆ 4 ಎಕರೆ ಜಮೀನು ಇದೆ. ಸದರಿ ಜಮೀನು ನೀರಾವರಿ ಜಮೀನು, ಅದರಲ್ಲಿ ಬೋರ್ ವೆಲ್ ಕೂಡಾ ಇದೆ. ಸದರಿ ಜಮೀನಿನಲ್ಲಿ ಟೊಮೊಟೋ, ರಾಗಿ, ತರಕಾರಿ ಬೆಳೆಯುತ್ತೇನೆ. ಟೊಮೊಟೋ ಬೆಳೆಯಿಂದ ವರ್ಷಕ್ಕೆ 10 ರಿಂದ 15 ಲಕ್ಷ ಆದಾಯ ಬರುತ್ತದೆ. ನನಗೆ ಇಬ್ಬರು ಮಕ್ಕಳಿದ್ದಾರೆ. ನನ್ನ ದೊಡ್ಡ ಮಗ ನನ್ನ ಜೊತೆ ವ್ಯವಸಾಯ ಮಾಡುತ್ತಾರೆ, ಚಿಕ್ಕ ಮಗ ಕಾರ್ಪೆಂಟರ್ ಕೆಲಸ ಮಾಡುತ್ತಾರೆ. ಆರೋಪಿ ಅಂಬ್ಲಿಕಲ್ ಗ್ರಾಮದವರು. ಆರೋಪಿ ನಮ್ಮ ಕಾರ್ಪೆಂಟರ್ ಅಂಗಡಿಗೆ ಆಗಾಗ ಬರುತ್ತಿದ್ದರು, ಆ ಮೂಲಕ ಪರಿಚಯ ಆಗಿರುತ್ತಾರೆ. ಆರೋಪಿಯ ಕುಟುಂಬದ ಬಗ್ಗೆ ಸ್ವಲ್ಪ ಗೊತ್ತಿರುತ್ತದೆ. ಆರೋಪಿಯ ಸ್ವತ್ತಿನ ಬಗ್ಗೆ ಮತ್ತು ಆದಾಯದ ಬಗ್ಗೆ ಗೊತ್ತಿಲ್ಲ.

ಆರೋಪಿ ವ್ಯವಸಾಯ ಮಾಡುತ್ತಿದ್ದರು. ಆರೋಪಿಗೂ ಜಮೀನು ಇದೆ. ಬೇರೆ ಯಾವ ಕೆಲಸ ಮಾಡುತ್ತಿದ್ದರು ಎಂದು ಸರಿಯಾಗಿ ಗೊತ್ತಿಲ್ಲ. ಆರೋಪಿ ಜನತಾ ವಿದ್ಯಾಮಂದಿರದಲ್ಲಿ ತಾತ್ಕಾಲಿಕವಾಗಿ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಆರೋಪಿ ಸುಮಾರು 15 ವರ್ಷಗಳಿಂದ ಪರಿಚಯ ಇದ್ದಾರೆ. ಆರೋಪಿ ನಮ್ಮ ಮನೆಗೆ ಬಂದಾಗ ಒಬ್ಬರೇ ಬಂದಿದ್ದರು. ಆರೋಪಿ ಹಣ ಕೇಳಲು ಮನೆಗೆ ಬಂದಿದ್ದರು. ಆರೋಪಿ ಮನೆಯಲ್ಲಿ ತೊಂದರೆ ಇದೆ ಎಂದು ಹಣ ಕೇಳಲು ಬಂದಿರುತ್ತಾರೆ. ಆರೋಪಿಯು ಈ ಹಣದ ವ್ಯವಹಾರಕ್ಕೂ ಮೊದಲು ಬೇರೆ ವ್ಯವಹಾರ ನನ್ನೊಂದಿಗೆ ಮಾಡಿರುವುದಿಲ್ಲ. ದಿಃ 15.11.2023

ರಂದು ಆರೋಪಿ 5 ಲಕ್ಷ ಹಣ ಬೇಕೆಂದು ಕೇಳಿರುತ್ತಾರೆ, ನಾನು ಎರಡು ದಿನ ಬಿಟ್ಟು ಹಣ ಕೊಡುವುದಾಗಿ ಹೇಳಿರುತ್ತೇನೆ.

ದಿಃ 17.11.2023 ರಂದು 10.00 ರಿಂದ 11.00 ಗಂಟೆ ಸಮಯದಲ್ಲಿ ಆರೋಪಿಗೆ ಹಣ ನೀಡಿರುತ್ತೇನೆ. ಹಣ ಕೊಡುವಾಗ ಆರೋಪಿಯ ಜೊತೆ ಬೇರೆ ಯಾರೂ ಬಂದಿರುವುದಿಲ್ಲ. ನಮ್ಮ ಮನೆಯಲ್ಲಿ ಇದ್ದ ಹಣವನ್ನು ಆರೋಪಿಗೆ ಕೊಟ್ಟಿರುತ್ತೇನೆ. ಆರೋಪಿಗೆ 500/– ರೂ ಮುಖಬೆಲೆಯ 10 ಕಟ್ಟು ಗಳನ್ನು ನೀಡಿರುತ್ತೇನೆ. ಆರೋಪಿಗೆ ಹಣವನ್ನು ಬಡ್ಡಿಗೆ ನೀಡಿರುವುದಿಲ್ಲ, ವಿಶ್ವಾಸದ ಮೇಲೆ ಹಣ ನೀಡಿರುತ್ತೇನೆ. ಆರೋಪಿ 3 ತಿಂಗಳಲ್ಲಿ ಹಣ ಹಿಂತಿರುಗಿಸುವುದಾಗಿ ಹೇಳಿದ್ದರು. ಹಣ ನೀಡಿದ ಸಮಯವನ್ನು ದೂರಿನಲ್ಲಿ ಹೇಳಿಲ್ಲ. ಆರೋಪಿ ಆ ಹಣವನ್ನು ಪಡೆಯಲು ಒಬ್ಬರೇ ಬಂದಿದ್ದರು ಎಂದು ದೂರಿನಲ್ಲಿ ತಿಳಿಸಿಲ್ಲ. ಆರೋಪಿಗೆ ನೀಡಲಾದ ನೋಟೀಸ್ ನಲ್ಲಿ ಹಣ ನೀಡಿದ್ದ ಸಮಯ ಮತ್ತು ಆರೋಪಿ ಒಬ್ಬರೇ ಬಂದಿರುವ ಬಗ್ಗೆ ಹೇಳಿಲ್ಲ.

ನಾನು ಆರೋಪಿಯನ್ನು ಹಣ ಹಿಂತಿರುಗಿಸುವಂತೆ ಕೇಳಿದ ನಂತರ ಚೆಕ್ ಅನ್ನು ನೀಡಿರುತ್ತಾರೆ. ಆರೋಪಿಯ ಮನೆಯಲ್ಲಿ ಚೆಕ್ ಅನ್ನು ನೀಡಿರುತ್ತಾರೆ. ಆರೋಪಿಯ ಕುಟುಂಬದವರು ಮನೆಯ ಒಳಗೆ ಇದ್ದರು. ಚೆಕ್ ನ ಬಣ್ಣ ಗೊತ್ತಿಲ್ಲ. ಆರೋಪಿ ಚೆಕ್ ಅನ್ನು ನನ್ನ ಸಮಕ್ಷಮ ಬರೆದಿಲ್ಲ. ಚೆಕ್ ನ ದಿಃ 20.02.2024. ಚೆಕ್ ನಲ್ಲಿರುವ ಬರವಣಿಗೆಯನ್ನು ನಾನೇ ಬರೆದಿರುತ್ತೇನೆ ಎಂದರೆ ಸರಿಯಲ್ಲ. ಗ್ರಾಮೀಣ ಬ್ಯಾಂಕ್ ನ ಚೆಕ್‌ಅನ್ನು ನೀಡಿರುತ್ತಾರೆ. ನಿಪಿ 1 ರ ಚೆಕ್ ನಲ್ಲಿರುವ ಸಹಿಯನ್ನು ಹೊರತುಪಡಿಸಿ ಉಳಿದ ಬರವಣಿಗೆಯನ್ನು ನಾನೇ ಬರೆದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಸಮಕ್ಷಮ ಚೆಕ್ ಗೆ ಸಹಿ ಮಾಡಿಲ್ಲ, ಮೊದಲೇ ಸಹಿ ಮಾಡಿ ಇಟ್ಟಿದ್ದರು. ಆರೋಪಿಯು ಚೆಕ್ ನ ಮೇಲೆ ಒಂದು ಸಹಿ ಮಾಡಿರುತ್ತಾರೆ. ಚೆಕ್ ಅನ್ನು ಪಡೆದುಕೊಳ್ಳುವಾಗ 9.30 ರಿಂದ 10.00 ಗಂಟೆ ಸಮಯ ಆಗಿತ್ತು. 20 ನೇ ತಾರೀಖು ಆರೋಪಿ ಚೆಕ್ ಕೊಟ್ಟಿದ್ದು, ಅದೇ ದಿನ ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ.

**(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೆ. ಸ. ಇದೆ.

ಸಹಿ/–

(ಶ್ರೀಮತಿ ರೋಹಿಣಿ. ಡಿ)

1 ನೇ ಅಪರ ಸಿ.ಜೆ ಮತ್ತು ಜೆಎಂಎಫ್ ಸಿ

ಮುಳಬಾಗಿಲು